MYSORE DIVISION

1. Mysore	-	1338
2. Mandya	-	528
3. Kodagu	-	5560
4. Mangalore	-	3436
5. Chickmagalur		752
6. Hassan	-	456
Total		12070

ರಾಜ್ಯವು ರೈತರಿಗೆ ಸರಬರಾಜು ಮಾಡಿದ ರಾಸಾಯನಿಕ ಗೊಬ್ಬರದ ಪ್ರಮಾಣ

1561 (2136) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್ಬುರ್ಗ)

ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;

ಅ) 1990-91ಮತ್ತು 1991-92ರ ಸಾಲಿನಲ್ಲಿ ರಾಜ್ಯದ ರೈತರಿಗೆ ಸರಬರಾಜು ಮಾಡಿದ ರಾಸಾಯನಿಕ ಗೊಬ್ಬರ ಮತ್ತು ಪರಿಕರಗಳ ಒಟ್ಟು ಪ್ರಮಾಣವೆಷ್ಟು ?(ದಯವಿಟ್ಟು ಜಿಲ್ಲಾವಾರು ವಿವರ ಒದಗಿಸುವುದು) ;

ಆ) ಒಟ್ಟು ವೆಚ್ಚ, ಜಿಲ್ಲಾವಾರು ವಿವರ ಒದಗಿಸುವುದು ;

ಇ) ರೈತರಿಗೆ ನೀಡಿದ ಸಹಾಯಧನದ ಮೊತ್ತ (ಜಿಲ್ಲಾವಾರು ವಿವರ ಒದಗಿಸುವುದು)?

ಶ್ರೀ ಎನ್.ಚಿಕ್ಕೇಗೌಡ (ಕೃಷಿ ಸಚಿವರು):-

ಅ)

ಸರಬರಾಜು ಮಾಡಿದ ಗೊಬ್ಬರದ ಪ್ರಮಾಣ		ಸರಬರಾಜು ಮಾಡಿದ ಕೃಷಿ ಪರಿಕರಗಳ ಚೀಲಗಳ ಪ್ರಮಾಣ		
1990-91	-	ಇಲ್ಲ	-	58,313 ನಂ
1991-92	-	ಇಲ್ಲ	-	59,810 ನಂ

(ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ)

ಆ) ರೂ.61,982 ಲಕ್ಷಗಳು.
(ಜಿಲ್ಲಾವಾರು ವಿವರ ಲಗತ್ತಿಸಿದೆ)

ಇ) ಮೇಲೆ ತಿಳಿಸಿದ ಚೀಲಗಳನ್ನು ರೈತರಿಗೆ ಉಚಿತವಾಗಿ ಹಂಚಲಾಗಿದೆ.

ಸರ್ಕಾರಿ ಜಮೀನಿನ ಅಕ್ರಮ ಸಾಗುವಳಿಯ ಸಕ್ರಮ:

1562 (2137) ಶ್ರೀ ಬಸವರಾಜ ರಾಯರೆಡ್ಡಿ, (ಯಲ್ಬುರ್ಗ)

ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಸಾರ್ವಜನಿಕರು ಕೃಷಿಗಾಗಿ ಎಷ್ಟು ಎಕರೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆ (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರವನ್ನು ನೀಡುವುದು);

ಆ) ಸರ್ಕಾರವು ಇಂತಹ ಒತ್ತುವರಿ ಜಮೀನುಗಳನ್ನು ಸಕ್ರಮೀಕರಣಗೊಳಿಸುವುದೇ ;

ಇ) ಹಾಗಿದ್ದರೆ, ಯಾವಾಗ ;

ಈ) ಯಾವ ಷರತ್ತುಗಳ ಮೇಲೆ ಈ ಒತ್ತುವರಿ ಜಮೀನುಗಳನ್ನು ಸಕ್ರಮೀಕರಣಗೊಳಿಸಲಾಗುವುದು.?

ಶ್ರೀ ಮಲ್ಲಿಕಾರ್ಜುನ.ಎಂ.ಖರ್ಗೆ (ಕಂದಾಯ ಸಚಿವರು):-

ಅ) 25.80 ಲಕ್ಷ ಎಕರೆ ಒತ್ತುವರಿ ಜಮೀನುಗಳನ್ನು ಸಕ್ರಮೀಕರಣಗೊಳಿಸುವುದಕ್ಕಾಗಿ ಒಟ್ಟು 10,86,826 ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ.

ಆ) ಹೌದು, ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಾಲಂ 94ಎ ಮತ್ತು ಕರ್ನಾಟಕ ಭೂ ಕಂದಾಯ ನಿಯಮಗಳ 1966ರ ನಿಯಮ 108 ಎಫ್ ಅಡಿಯಲ್ಲಿ ಅರ್ಹರಾದ ವ್ಯಕ್ತಿಗಳ ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮೀಕರಣಗೊಳಿಸಲಾಗುವುದು.

ಇ) ಈ ಬಗ್ಗೆ ಸಮಿತಿಗಳನ್ನು ರಚಿಸಲಾಗಿದ್ದು, ಅವುಗಳು ಈಗಾಗಲೇ ಅರ್ಹತೆಯ ಮೇರೆಗೆ ಪ್ರಕರಣಗಳನ್ನು ಪರಿಶೀಲಿಸಿ ಸಕ್ರಮೀಕರಣಗೊಳಿಸುವುವು.

ಈ) ಕರ್ನಾಟಕ ಭೂ ಕಂದಾಯ ನಿಯಮಗಳ ನಿಯಮ 108ಜೆ ಅನ್ವಯ ಕೆಲವೊಂದು ನಿಬಂಧನೆಗಳ ಮೇರೆಗೆ ಅರ್ಹ ಪ್ರಕರಣಗಳನ್ನು ಸಕ್ರಮಗೊಳಿಸುವುವು.

ತುಂಗಭದ್ರ ನದಿ ಕಣಿವೆ ಯೋಜನೆಯಲ್ಲಿ ಭೂಸಾರ ಸಂರಕ್ಷಣಾ ಕಾಮಗಾರಿಗಳು

1563 (2138) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗ)

ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;

ಅ) ತುಂಗಭದ್ರ ನದಿ ಕಣಿವೆ ಯೋಜನೆಯಲ್ಲಿ ಭೂಸಾರ ಸಂರಕ್ಷಣಾ ಕಾಮಗಾರಿಗಳಿಗಾಗಿ ಗುರುತಿಸಿರುವ ಪ್ರದೇಶ ಹಾಗೂ ತಾಲೂಕುಗಳು ;

ಆ) ಅಂದಾಜು ವೆಚ್ಚ (ತಾಲ್ಲೂಕುವಾರು ನೀಡುವುದು);

ಇ) 1991-92 ಹಾಗೂ 1992-93ನೇ ವಾರ್ಷಿಕ ಯೋಜನೆಗಳಿಗಾಗಿ ಬಿಡುಗಡೆ ಮಾಡಿರುವ, ಮಾಡಬೇಕಿರುವ ಅನುದಾನದ ಮೊತ್ತ (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು) ?

ಶ್ರೀ ಎನ್ ಚಿಕ್ಕೇಗೌಡ (ಕೃಷಿ ಸಚಿವರು)-

ಅ) ತುಂಗಭದ್ರಾ ನದಿ ಕೊಳ್ಳ ಯೋಜನೆಯಡಿಯಲ್ಲಿ 1991-92ನೇ ಸಾಲಿನಲ್ಲಿ ಈ ಕೆಳಕಂಡ ತಾಲ್ಲೂಕುಗಳಲ್ಲಿ ಕೆಲಸ ಕಾರ್ಯಗತ ಮಾಡಲಾಗುತ್ತಿದೆ.

1..ಸವಣೂರು 2.ಶಿಗ್ಗಾಂವ್ 3.ಹಾನಗಲ್ 4.ಯಲಬುರ್ಗಾ 5.ರೋಣ 6.ಶಿರಹಟ್ಟಿ

ಭೂಸಾರ ಸಂರಕ್ಷಣಾ ಕಾಮಗಾರಿಗಳಿಗಾಗಿ ಭೂ ಸವಕಳಿಗೆ ಹೆಚ್ಚಿಗೆ ತುತ್ತಾಗುವ ಆಧ್ಯತಾ ಪ್ರದೇಶ 8.60 ಲಕ್ಷ ಹೆಕ್ಟೇರ್ ಎಂದು ಗುರುತಿಸಲಾಗಿದೆ.

ಆ) ತಾಲ್ಲೂಕುವಾರು ಕಾಮಗಾರಿಗಳಿಗಾಗಿ ತಗಲುವ ಅಂದಾಜು ವೆಚ್ಚ 1991-92ನೇ